<u>**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜಗಳೂರು.**</u>

<u>**ಸಿ.ಸಿ.ನಂಃ505/2023**</u>

ಪಿರ್ಯಾದಿದಾರ: ಶ್ರೀ.ಗಿರೀಶ್ ವಿ ತಂದೆ ವಜ್ರನಾಯ್ಕ
ವಯಸ್ಸುಃ32 ವರ್ಷ, ವೃತ್ತಿ:ವ್ಯವಸಾಯ
ವಾಸಃ ವೆಂಕಟೇಶ್‌ಪುರ ಗ್ರಾಮ
ತಾಃ ಜಗಳೂರು, ಜಿಲ್ಲೆ: ದಾವಣಗೆರೆ.

**-:: ವಿರುದ್ದ ::-**

ಆರೋಪಿ : ಶ್ರೀಮತಿ.ಗಿರೀಜ ಬಾಯಿ ಕೋಂ ಗೋವಿಂದನಾಯ್ಕ,
ವಯಸ್ಸುಃ35 ವರ್ಷ, ವೃತ್ತಿ:ವ್ಯಾಪಾರ ಮತ್ತು ವ್ಯವಸಾಯ
ವಾಸಃ-ಚಿಕ್ಕನಹಳ್ಳಿ ಕ್ಯಾಂಪ್, ಆರ್.ಎಂ.ಸಿ., ಯಾರ್ಡ್
ದಾವಣಗೆರೆ ನಗರ, ದಾವಣಗೆರೆ ಜಿಲ್ಲೆ.

<u>**ಆಪಾದನೆ**</u>

ಆರೋಪಿಯಾದ ನೀವು ಪಿರ್ಯಾದಿದಾರರಿಂದ ದಿನಾಂಕಃ20.12.2022 ರಂದು ರೂ.3,00,000/- ಕೈಗಡ ಸಾಲವನ್ನು ಪಡೆದುಕೊಂಡಿರುತ್ತೀರಿ, ಸದರಿ ಹಣವನ್ನು ಎರಡು ತಿಂಗಳ ಒಳಗಾಗಿ ಮರುಪಾವತಿ ಮಾಡುತ್ತೇನೆಂದು ಹೇಳಿರುತ್ತೀರಿ, ಸದರಿ ಸಾಲದ ತೀರುವಳಿಗಾಗಿ ಅದೇ ದಿನ ಒಂದು ಪ್ರಗತಿ ಗ್ರಾಮೀಣಾ ಬ್ಯಾಂಕ್ ಚೆಕ್ ನಂ.102181 ನ್ನು ಮುಂಗಡ ದಿನಾಂಕಃ21.02.2023 ಎಂದು ನಮೂದಿಸಿ ರೂ.3,00,000/- ರೂಗಳಿಗೆ ಪಿರ್ಯಾದುದಾರರ ಹೆಸರಿಗೆ ನಗದೀಕರಿಸಿಕೊಳ್ಳಲು ಕೊಟ್ಟಿರುತ್ತೀರಿ. ದಿನಾಂಕಃ20.02.2023 ರಂದು ಸದರಿ ಚೆಕ್ಕನ್ನು ಎಸ್.ಬಿ.ಐ., ಬ್ಯಾಂಕ್, ಜಗಳೂರು ಶಾಖೆಯಲ್ಲಿ ನಗದೀಕರಿಸಿಕೊಳ್ಳಲು ಹಾಜರುಪಡಿಸಿರುತ್ತಾರೆ. ಆದರೆ ಸದರಿ ಚೆಕ್ ನಗದಾಗದೇ

ದಿನಾಂಕಃ23.02.2023 ರಂದು ["Funds insufficient"] ಎಂಬ ಷರಾದ ಹಿಂಬರಹದೊಂದಿಗೆ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಚಕ್ ನಗದೀಕರಣವಾಗದೇ ಹಿಂದಿರುಗಿ ಬಂದಿರುತ್ತದೆ. ಆದ್ದರಿಂದ ನೀವು ಮತ್ತೆ ಸದರಿ ಹಣವನ್ನು ಇಂದು ಕೊಡುತ್ತೇನೆ, ನಾಳೆ ಕೊಡುತ್ತೇನೆ, ಎಂದು ಸುಳ್ಳು ಹೇಳುತ್ತಾ ಬಂದಿರುತ್ತೀರಿ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕಃ17.03.2023 ರಂದು ಆರ್.ಪಿ.ಎ.ಡಿ. ಪೋಸ್ಟ್ ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟೀಸು "Addressee was not claimed" ಎಂದು ವಾಪಸ್ಸಾಗಿರುತ್ತದೆ. ಆದ್ದರಿಂದ ಆರೋಪಿಯಾದ ನೀವು ಫಿರ್ಯಾದುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಹಣವನ್ನು ತೀರುವಳಿ ಮಾಡಿರುವುದಿಲ್ಲ. ಆದ್ದರಿಂದ ಆರೋಪಿಯಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಕಲಂ 138 ನೆಗೋಷಿಯಬಲ್ ಇನೂಷ್ಟ್ರುಮೆಂಟ್ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರೆಂದು ಆಪಾದಿಸಲಾಗಿದೆ.

ಸಹಿ

ದಿನಾಂಕ :19.10.2023.
ಸ್ಥಳ : ಜಗಳೂರು.

**ದಿ.ನ್ಯಾ. ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ,**
**ಜಗಳೂರು.**

**ಆರೋಪಿಯ ಹೇಳಿಕೆ**

ಪ್ರಶ್ನೆಃ  ಈ ಮೇಲೆ ಹೇಳಲಾದ ಆಪಾದನೆ ನಿಮಗೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ ಈ ಮೇಲೆ ಹೇಳಲಾದ ಆಪಾದನೆಯನ್ನು ನೀನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕೋ?

ಉತ್ತರಃ

(ಈ ಮೇಲಿನ ಆಪಾದನೆಯ ಸಾರಾಂಶವನ್ನು ಆರೋಪಿಗೆ ನಾನೇ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಅಂತ ಈ ಮೂಲಕ ದೃಢೀಕರಿಸುತ್ತೇನೆ.)

ಸಹಿ

ದಿನಾಂಕ :19.10.2023. **ದಿ.ನ್ಯಾ. ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ,**
ಸ್ಥಳ : ಜಗಳೂರು. **ಜಗಳೂರು.**